# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 2404922
E-mail : aeehtgmys@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪ-ವಿಭಾಗ, ಹೂಟಗಳ್ಳಿ,
ಮೈಸೂರು.


ಕ್ರ.ಸಂ: ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಹೂ. 1223-26 ದಿನಾಂಕ : 13.09.2017
14

## ಸಭಾ ನಡಾವಳಿ

ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ದಿನಾಂಕ : 31.08.2017 ರಂದು ಬೆಳಗ್ಗೆ 11 :00 ಗಂಟೆಗೆ ಜನ ಸಂಪರ್ಕ ಸಭೆಯನ್ನು ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

ಸಭೆಗೆ ಹಾಜರಿದ್ದ ಅಧಿಕಾರಿ/ನೌಕರರು :-

1. ಶ್ರೀಯುತ ನರಸಿಂಹೇಗೌಡ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು.
2. ಶ್ರೀ. ಕೇಶವಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಹೂಟಗಳ್ಳಿ ಉಪವಿಭಾಗ, ಮೈಸೂರು
3. ಶ್ರೀಮತಿ ಮಂಜುಳಾ, ಸಹಾಯಕ ಇಂಜಿನಿಯರ್(ತಾ), ಚಾ.ವಿ.ಸ.ನಿ.ನಿ, ಹೂಟಗಳ್ಳಿ ಉಪವಿಭಾಗ, ಮೈಸೂರು
4. ಶ್ರೀ ಮಂಜುನಾಥ, ಸಹಾಯಕ ಇಂಜಿನಿಯರ್(ವಿ), ಹೂಟಗಳ್ಳಿ ಶಾಖೆ,
5. ಶ್ರೀ ಸಂದೀಪ್, ಸಹಾಯಕ ಇಂಜಿನಿಯರ್(ವಿ), ಬೋಗಾದಿ ಶಾಖೆ.
6. ಶ್ರೀ ಎಂ. ನಾಗೇಂದ್ರ, ಕಿರಿಯ ಇಂಜಿನಿಯರ್(ವಿ), ಬೀರಿಹುಂಡಿ ಶಾಖೆ.
7. ರಾಘವೇಂದ್ರ ಹೆಚ್.ಎ, ಕಿರಿಯ ಇಂಜಿನಿಯರ್(ವಿ), ಇಲವಾಲ ಶಾಖೆ

ಸಭೆಗೆ ಹಾಜರಿದ್ದ ಗ್ರಾಹಕರು :

1. ಶ್ರೀ ರವಿಕುಮಾರ್, ವಿಜಯನಗರ 1ನೇ ಹಂತ, ಮೈಸೂರು.
2. ಶ್ರೀ ಮಹದೇವ, ಹಿನಕಲ್, ಮೈಸೂರು.
3. ಶ್ರೀ ಕುಮಾರ್, ಜಿ.ಜಿ.ಬ್ಲಾಕ್, ಹೂಟಗಳ್ಳಿ, ಮೈಸೂರು.
4. ಶ್ರೀ ತಮ್ಮಯ್ಯ, ಜಿ.ಜಿ. ಬ್ಲಾಕ್, ಹೂಟಗಳ್ಳಿ, ಮೈಸೂರು
5. ಶ್ರೀ ನಾಗರಾಜು, ಜಿ.ಜಿ. ಬ್ಲಾಕ್, ಹೂಟಗಳ್ಳಿ, ಮೈಸೂರು
6. ಅಶ್ವಥ್‌ನಾರಾಯಣ್, ಮೈಸೂರು.
7. ನಂಜುಂಡ, ಹಿನಕಲ್, ಮೈಸೂರು

*********

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ...ಗತಿಸಿ ಸಭೆ ಪ್ರಾರಂಭಿಸಲಾಯಿತು. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ...ಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ...ಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ...ಯನ್ನು ನಡೆಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

...2

ದಿನಾಂಕ : 08.07.2017 ರಂದು ಹೂಟಗಳ್ಳಿ ಉಪವಿಭಾಗದಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದುಕೊರತೆಗಳ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ವಿವರಿಸಿದರು.

| ಕ್ರ.ಸಂ. | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ತೆಗೆದುಕೊಂಡ ಕ್ರಮಗಳು |
|---|---|---|---|
| | ಶ್ರೀ ರವಿಕುಮಾರ್ ವಿಜಯನಗರ 1ನೇ ಹಂತ | ಮೊದಲನೆಯದಾಗಿ ಉಪ ವಿಭಾಗಧಿಕಾರಿ ಯವರು ಹಾಗೂ ಶಾಖಾಧಿಕಾರಿಯವರು ತಮ್ಮ ಎಲ್ಲಾ ದೂರುಗಳಿಗೆ ಸ್ಪಂದಿಸುತ್ತಿರುವುದಾಗಿ ಅಭಿನಂದನೆ ಯನ್ನು ತಿಳಿಸಿದರು.<br>▪ ವಿಜಯನಗರ 4ನೇ ಹಂತದ ರಸ್ತೆ ಬದಿಯಲ್ಲಿರುವ ಕಂಬ ದಿಂದಾಗಿ ಜನರಿಗೆ ತೊಂದರೆ ಯಾಗುತ್ತಿದ್ದು, ಈ ಕಂಬವನ್ನು ಸ್ಥಳಾಂತರಿಸಲು ಕೋರಿರುತ್ತಾರೆ.<br>▪ ವಿಜಯನಗರ 'ಬಿ' ಬ್ಲಾಕ್ ನಲ್ಲಿ ಎರಡು ಮಧ್ಯಂತರ ಕಂಬವನ್ನು ಅಳವಡಿಸಲು ಕೋರಿರುತ್ತಾರೆ.<br>▪ 1912 ನಲ್ಲಿ ದೂರನ್ನು ಸ್ವೀಕರಿಸಲು ಅಡೆತಡೆಗಳಾಗು ತ್ತಿರುತ್ತದೆ. ಮತ್ತು ಹೂಟಗಳ್ಳಿ ಉಪವಿಭಾಗ ದವರು ದೂರುಗಳನ್ನು ಸ್ವೀಕರಿಸಿ ಕೂಡಲೆ ತೊಂದರೆಯನ್ನು ನಿವಾರಿಸಿರುತ್ತಾರೆ ಎಂದು ಪ್ರಶಂಸನೀಯ ವ್ಯಕ್ತ ಪಡಿಸಿರುತ್ತಾರೆ. | ▪ ಕಂಬವನ್ನು ಸ್ಥಳಾಂತರ ಮಾಡಲಾಗಿದೆ.<br>▪ ಮಧ್ಯಂತರ ಕಂಬವನ್ನು ಅಳವಡಿಸಲಾಗಿದೆ. |
| | ಕುಮಾರ್ ಹೂಟಗಳ್ಳಿ ಮೈಸೂರು. | ▪ ಜನಸಂಪರ್ಕ ಸಭೆಯನ್ನು ಹಮ್ಮಿಕೊಂಡಿರುವ ವಿಚಾರವನ್ನು ಒಂದು ವಾರ ಅಥವಾ 10 ದಿನ ಮುಂಚಿತವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಲು ಕೋರಿರುತ್ತಾರೆ.<br>▪ ತಾತ್ಕಾಲಿಕ ವಿದ್ಯುತ್‌ಸರಬರಾಜಿನ ಎ.ಸಿ.ಸಿ ಮೊತ್ತ ವನ್ನು ಗ್ರಾಹಕರ ಪತ್ರವಿಲ್ಲದೆ ಮೊತ್ತವನ್ನು ಶಾಶ್ವತ ಆರ್.ಆರ್.ಸಂಖ್ಯೆಗೆ ಹೊಂದಾಣಿಕೆ ಮಾಡಲು ಕೋರಿರುತ್ತಾರೆ. | ▪ ಕ್ರಮ ಕೈಗೊಳ್ಳಲಾಗಿದೆ.<br>▪ ನಿಗಮದ ನಿಯಮಾನುಸ ಕ್ರಮ ಕೈಗೊಳ್ಳಲಾಗುತ್ತಿ |

| | | |
|---|---|---|
| | ▪ ಒಂದೆ ಸ್ಥಳದಲ್ಲಿ ಅಭಿವೃದ್ಧಿ ಶುಲ್ಕವನ್ನು ಪಾವತಿಸಿದ್ದು ಈ ಶುಲ್ಕವನ್ನು ಬೇರೆ ಆರ್.ಆರ್. ಸಂಖ್ಯೆಗೆ ಬದಲಾಯಿಸಿ ಕೊಡಲು ಕೋರಿರುತ್ತಾರೆ.<br><br>▪ ಹಾಲಿ ಇರುವ ಸ್ಥಾವರಗಳಿಗೆ ಟ್ಯಾಪಿಂಗ್ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವ ಸಮಯದಲ್ಲಿ ಇಲಾಖೆಯಿಂದ ಇತ್ತೀಚಿನ ಮಾಲಿಕತ್ವದ ಪುರಾವೆ ದಾಖಲಾತಿಗಳನ್ನು ಒದಗಿಸಲು ಸೂಚಿಸಿರುತ್ತಾರೆ. ಇದನ್ನು ಪಡೆಯದೇ ಇರಲು ಸಂಬಂಧ ಪಟ್ಟವರಿಗೆ ಸೂಚಿಸಬೇಕಾಗಿ ಕೋರಿರುತ್ತಾರೆ. | ▪ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.<br><br>▪ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |
| ...ಹದೇವ, ಹಿನಕಲ್, ಮೈಸೂರು | ▪ ರಿಂಗ್ ರಸ್ತೆಯಲ್ಲಿ ಅಗಲೀಕರಣದ ಸಂಬಂಧ ಸಾರ್ವಜನಿಕರಿಗೆ ಸಂಚರಿಸಲು ಬಹಳಷ್ಟು ತೊಂದರೆಯಾಗಿರು ತ್ತದೆ ಎಂದು ತಿಳಿಸಿದರು. | ▪ ವಿದ್ಯುತ್ ಕಂಬಗಳನ್ನು ರಸ್ತೆ ಬದಿಗೆ ಸ್ಥಳಾಂತರ ಮಾಡಲಾಗಿದೆ. |
| ...ಶ್ರೀ ರಂಗ ...ಪ್ರಸಾದ್ ...# 124, ...ಹೆಚ್.ಬಿ ...ಾಲೋನಿ, ...ೂಟಗಳ್ಳಿ | ▪ ತಮ್ಮ ಮನೆಯ ಪಕ್ಕದಲ್ಲಿ ಕಂಬವು ಶಿಥಿಲಗೊಂಡಿದ್ದು ಈ ದೂರನ್ನು ಈಗಾಗಲೆ ಸಲ್ಲಿಸಿದ್ದು, ಕಾಮಗಾರಿಯು ಪೂರ್ಣಗೊಂಡಿ ರುವುದಕ್ಕೆ ಪ್ರಶಂಸನೀಯ ವ್ಯಕ್ತ ಪಡಿಸಿರುತ್ತಾರೆ. ಹಾಗೂ ತಮ್ಮ ಮನೆಯ ಮುಂದಿನ ಕಂಬವನ್ನು ಸ್ಥಳಾಂತರಿಸಿ, ಯು.ಜಿ ಕೇಬಲಿನ ಮುಖಾಂತರ ಸಂಪರ್ಕ ಒದಗಿಸಲು ತಿಳಿಸಿರುತ್ತಾರೆ. | ▪ ಕಾಮಗಾರಿ ಪೂರ್ಣಗೊಂಡಿ ರುತ್ತದೆ. |
| ...ಮತಿ ಭಾಗ್ಯ, ...ಕಲ್, ...ಸೂರು | ▪ ಹಿನಕಲ್ ವ್ಯಾಪ್ತಿಯ ಅರಳಿ ಮರದ ಬಳಿ ಇರುವ ಪರಿವರ್ತಕ ದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಈ ಪರಿವರ್ತಕವನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕೋರಿರುತ್ತಾರೆ.<br>▪ ISD ಇಲ್ಲದೆ ಅಂಗನವಾಡಿ ಹಾಗೂ ಬಡಜನರಿಗೆ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | ▪ ಸ್ಥಳ ಪರಿಶೀಲಿಸಲಾಗಿ... ಸದರಿ ಸ್ಥಳದಲ್ಲಿರುವ... ಪರಿವರ್ತಕವನ್ನು ಸ್ಥಳಾಂತ... ಮಾಡಲು ಸ್ಥಳ... ಲಭ್ಯವಿಲ್ಲದ ಕಾರ... ಸ್ಥಳಾಂತರ ಮಾಡಲ... ಸಾಧ್ಯವಿರುವುದಿಲ್ಲ. |

| | | | |
|---|---|---|---|
| | | | ಕೆಲಸ ನಿರ್ವಹಿಸಬೇಕಾಗಿದ್ದು, ಈ ಸಂಬಂಧ ನಿಗಮವತಿಯಿಂದ ಅಂದಾಜುಪಟ್ಟಿ ತಯಾರಿಸಿ ಕ್ರಮಕೈಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಸೂಚನೆಯನ್ನು ನೀಡಿದರು.<br>■ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಆಶ್ರಯ ಮನೆಯ ವ್ಯಾಪ್ತಿಯಲ್ಲಿ ಹೆಚ್ಚುವರಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಕೂಡಲೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು. |
| 3 | ಅಶ್ವಥ್ ನಾರಾಯಣ | ■ ಜನಪ್ರತಿನಿಧಿಗಳ ಸಭೆಯನ್ನು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಏರ್ಪಡಿಸಲು ಚಾ.ವಿ.ಸ.ನಿ.ನಿ ವತಿಯಿಂದ ಪತ್ರವನ್ನು ನೀಡಬೇಕಾಗಿ ಕೋರಿರುತ್ತಾರೆ.<br>■ ಜನ ಸಂಪರ್ಕ ಸಭೆಯನ್ನು ಹೆಚ್ಚಿನ ಪ್ರಚಾರ ಮಾಡಬೇಕಾಗಿ ಕೋರಿರುತ್ತಾರೆ. | ■ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಉತ್ತರಿಸುತ್ತ ಜನ ಪ್ರತಿನಿಧಿಗಳ ಸಭೆಯನ್ನು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಏರ್ಪಡಿಸಲು ಚಾ.ವಿ.ಸ.ನಿ.ನಿ ವತಿಯಿಂದ ಸಾಧ್ಯವಿರುವುದಿಲ್ಲ, ಹಾಗೂ ಈ ವಿಚಾರವನ್ನು ತಾವೇ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತದೆ.<br>■ ಜನ ಸಂಪರ್ಕ ಸಭೆಯನ್ನು ಹೆಚ್ಚಿನ ಪ್ರಚಾರವನ್ನು ಚಾ.ವಿ.ಸ.ನಿ.ನಿ ವತಿಯಿಂದ ಈಗಾಗಲೆ ಪತ್ರ ಪ್ರಕಟಣೆಯನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಕಟಿಸಿರುವುದು ಹಾಗೂ ಕ್ಷೇತ್ರದ ಪ್ರತಿನಿದಿಯವರಿಗೆ ಮೊಬೈಲ್ ಮುಖಾಂತರ ತಿಳಿಸುತ್ತಿದ್ದೇವೆ ಹಾಗೂ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಮಾಡಲಾಗುವುದು ಎಂದು ತಿಳಿಸಿದರು. |
| | ಶ್ರೀ ಕುಮಾರ್, ಶ್ರೀ ನಾಗರಾಜು, ಶ್ರೀ ತಮ್ಮಯ್ಯ | ■ ನಮ್ಮ ಸ್ಥಾವರಗಳು ಇಲವಾಲ ವ್ಯಾಪ್ತಿಗೆ ಬರುತ್ತಿದ್ದು, ಜಿ.ಜಿ.ಬ್ಲಾಕ್‌ನ ನಿರ್ವಹಣಾ | ■ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ತಮ್ಮ ಸ್ಥಾವರವು Non RAPDRP ವ್ಯಾಪ್ತಿಗೆ ಬರುತ್ತಿ |

ನಂತರ, ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ದಿನಾಂಕ : 31.08.2017 ರ ... ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆ... ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿ, ಸಭೆಯನ್ನು ಆರಂಭಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡಂತಿರುತ್ತವೆ :

| ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|
| ...ೀ ರವಿಕುಮಾರ್, ...ಜಯನಗರ ...ೇ ಹಂತ | ▪ ಬೀದಿದೀಪ ಹಾಗೂ ಕುಡಿಯುವ ನೀರಿನ ಮಾಪಕಗಳ ಮೀಟರ್ ಬಾಕ್ಸ್ ನಿರ್ವಹಣೆ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಗ್ರಾಹಕರಿಗೆ ಉತ್ತರಿಸಿ, ಬೀದಿ ದೀಪ ಹಾಗೂ ಕುಡಿಯುವ ನೀರು ಸರಬರಾಜು ಸ್ಥಾವರಗಳ ನಿರ್ವಹಣಾ ಕಾರ್ಯವನ್ನು ಆಯಾ ನಗರಾಭಿವೃದ್ಧಿ ಪ್ರಾಧಿಕಾರ, ಮಹಾನಗರ ಪಾಲಿಕೆ ಹಾಗೂ ಗ್ರಾಮಪಂಚಾಯಿತಿಗಳ ವ್ಯಾಪ್ತಿಯವರೇ ಮಾಡ ಬೇಕಾಗಿರುತ್ತದೆ ಎಂದು ತಿಳಿಸಿದ್ದರು. ಹಾಗೂ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ತಮ್ಮ ವ್ಯಾಪ್ತಿಯ ಎಲ್ಲಾ ದುರಸ್ತಿ ಗೊಂಡಿರುವ ಬೀದಿದೀಪ ಹಾಗೂ ಕುಡಿಯುವ ನೀರಿನ ಮಾಪಕಗಳ ಫೋಟೋ ತೆಗೆದು ಸಂಬಂಧ ಪಟ್ಟವರಿಗೆ ಆರ್.ಆರ್. ಸಂಖ್ಯೆಯ ವಿವರದ ಸಹಿತ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದರು. |
| ...ಹದೇವು, ...ರ್, ...ರು | ▪ ರಾಜರಾಜೇಶ್ವರಿ ನಗರದ ಆಶ್ರಯ ಬಡಾವಣೆಯ ವ್ಯಾಪ್ತಿಯಲ್ಲಿ 5-6 ಕಂಬಗಳನ್ನು ಸ್ಥಳಾಂತರಿಸಿ ಕೊಡಲು ಕೋರಿರು ತ್ತಾರೆ.<br>▪ ಆಶ್ರಯ ಮನೆಯ ವ್ಯಾಪ್ತಿ ಯಲ್ಲಿಯೇ ಹೆಚ್ಚುವರಿ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡಲು ಕೋರಿರು ತ್ತಾರೆ. | ▪ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಮಹದೇವುರವರಿಗೆ ಉತ್ತರಿಸುತ್ತಾ, ಆಶ್ರಯ ಮನೆಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ನಡೆಸುತ್ತಿರುವುದರಿಂದ, ವಿದ್ಯುತ್ ಕಂಬವನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕಾದಲ್ಲಿ ಗ್ರಾಮ ಪಂಚಾಯಿತಿಯಿಂದ ಪತ್ರ ಪಡೆದು ಗ್ರಾಹಕರು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ |

| | | |
|---|---|---|
| ಜಿ.ಜಿ. ಬ್ಲಾಕ್, ಮೈಸೂರು. | ಕಾರ್ಯವನ್ನು ಹೂಟಗಳ್ಳಿಗೆ ವರ್ಗಾಹಿಸಲು ಕೋರಿರುತ್ತಾರೆ<br>■ ತಮ್ಮ ಬಿಲ್ಲನ್ನು ಜಿ.ಜಿ.ಬ್ಲಾಕ್‌ನಿಂದ ಇಲವಾಲ ಕಛೇರಿಗೆ ಹೋಗಿ ಪಾವತಿಸಲು ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿದರು. | ತಮ್ಮ ಸ್ಥಾವರವನ್ನು RA... ಜಾಲಕ್ಕೆ ವರ್ಗಾಹಿಸ... ಸಾಧ್ಯವಿರುವುದಿಲ್ಲ ಹಾಗೂ ತಮ್ಮ ವ್ಯಾಪ್ತಿಯ ನಿರ್ವಹಣಾ ಕಾರ್ಯವನ್ನು ಹೂಟಗಳ್ಳಿ ಸೇವಾಕೇಂದ್ರದಿಂದಲೇ ಲಭ್ಯವಾಗುವಂತೆ ಕೂಡಲೆ ಕ್ರಮ ತೆಗದುಕೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸುತ್ತಾ, ಮುಂದಿನ ದಿನಗಳಲ್ಲಿ ತಮ್ಮ ವ್ಯಾಪ್ತಿಯ ಸ್ಥಾವರಗಳನ್ನು RAPDRP ವ್ಯಾಪ್ತಿಗೆ ಸೇರಿಸಲಾಗುವುದು ಎಂದು ತಿಳಿಸಿರುತ್ತಾರೆ, ಹಾಗೂ ತಮ್ಮ ಬಿಲ್ಲುಗಳ ಹಣವನ್ನು ಉಪವಿಭಾಗದ ಎ.ಟಿ.ಪಿ ಕೌಂಟರ್‌ನಲ್ಲಿಯೇ ಪಾವತಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.<br>■ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರು ದಿನಾಂಕ : 01.09.2017 ರಿಂದ ನೂತನ ಸರ್ವಿಸ್ ಸ್ಟೇಷನ್ ವಾಹನವು ಲಭ್ಯವಿದ್ದಲ್ಲಿ ಜಿ.ಜಿ. ಬ್ಲಾಕ್ ವ್ಯಾಪ್ತಿಯ ದೂರುಗಳನ್ನು ಹೂಟಗಳ್ಳಿ ವ್ಯಾಪ್ತಿಯಲ್ಲಿಯೇ ನಿರ್ವಹಿಸಲು ತಿಳಿಸಿದರು. |
| ... ನಂಜುಂಡ, ...ರಕಲ್, ...ಸೂರು | ■ ಹಿನಕಲ್ ವ್ಯಾಪ್ತಿಯ AB ಕೇಬಲ್ ಅಳವಡಿಸಿದ್ದು, ಶಾಖಾಧಿಕಾರಿಯವರಿಗೆ ಪ್ರಶಂಸನೀಯ ವ್ಯಕ್ತ ಪಡಿಸಿದರು.<br>■ ಹಿನಕಲ್ ವ್ಯಾಪ್ತಿಯಲ್ಲಿರುವ ಎಲ್.ಟಿ. ಲೈನ್ ಸಿಪ್ಟ್ ಮಾಡಲು ಕೋರಿರುತ್ತಾರೆ. | ■ ಮಾನ್ಯ ಅಧೀಕ್ಷಕ ಇಂಜಿನಿಯರ್ ರವರು ಪ್ರಶಂಸನೀಯ ವ್ಯಕ್ತ ಪಡಿಸಿದ ನಂಜುಂಡ ರವರಿ... ವಂದನೆಗಳನ್ನು ತಿಳಿಸಿದರು.<br>■ ಮಾನ್ಯ ಅಧೀಕ್ಷಕ ಇಂಜಿನಿಯ... ರವರು ವಿದ್ಯುತ್ ಲೈನ್... ಸ್ಥಳಾಂತರ ಮಾಡಬೇಕಾ... ಗ್ರಾಮ ಪಂಚಾಯಿತಿಯಿಂದ ... ಪಡೆದು ಗ್ರಾಹಕರು ಸ... ಕಾರ್ಯನಿರ್ವಾಹಣೆ ಯೋಜನೆ... ಕೆಲಸ ನಿರ್ವಹಿಸಬೇಕಾಗಿ... ಎಂದು ಸೂಚನೆಯನ್ನು ನೀಡಿ... |

ಮುಖ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡಿ, ಗ್ರಾಹಕರು ಈ ಸಭೆಯಲ್ಲಿ ಪ್ರಸ್ತಾಪಿಸಿದ ದೂರುಗಳನ್ನು ಆದ್ಯತೆ ಮೇರೆಗೆ ಬಗೆಹರಿಸುವುದಾಗಿ ತಿಳಿಸಿ, ಭಾಗವಹಿಸಿದ ಎಲ್ಲಾ ಗ್ರಾಹಕರಿಗೆ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಹೂಟಗಳ್ಳಿ ಉಪವಿಭಾಗ,
ಮೈಸೂರು.

ಯನ್ನು :

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ವಿಭಾಗ, ಜೋಡಿ ಬಸವೇಶ್ವರ ರಸ್ತೆ, ಕುವೆಂಪುನಗರ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
ಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
ಕಛೇರಿ ಪ್ರತಿ.